<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: 2015–16ನೇ ಸಾಲಿಗೆ ಸೌರಶಕ್ತಿ ಯೋಜನೆಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ(ಕೆ.ಆರ್.ಇ.ಡಿ.ಎಲ್) ದಿಂದ ಅನುಷ್ಠಾನ ಕುರಿತು.

ಓದಲಾಗಿದೆ: 1. ಆಯವ್ಯಯ 2015–16ರಲ್ಲಿ ಕಂಡಿಕೆ 392 ರಂತೆ ಇಂಧನ ಇಲಾಖೆಗೆ ಒದಗಿಸಿರುವ ಅನುದಾನದಡಿ.

2. ಆರ್ಥಿಕ ಇಲಾಖೆರವರ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 684 ವೆಚ್ಚ1/2015 ದಿನಾಂಕ: 17.07.2015.

3. ಕೆ.ಆರ್.ಇ.ಡಿ.ಎಲ್ ರವರ ಪತ್ರ ಸಂಖ್ಯೆ: KREDL/07/SOG-2/SWP-750/19/2016/116 ದಿನಾಂಕ: 16.01.2016.

4. ಸರ್ಕಾರಿ ಆದೇಶ ಸಂಖ್ಯೆ: ಇಎನ್ 54 ವಿಎಸ್‌ಸಿ 2014 ದಿನಾಂಕ:28.02.2015.

********

<u>ಪ್ರಸ್ತಾವನೆ:</u>

ಸೋಲಾರ್ ಉತ್ಪಾದನೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಸರ್ಕಾರವು ಆರ್ಥಿಕ ವರ್ಷ 2015–16ರಲ್ಲಿ ಸೋಲಾರ್ ಯೋಜನೆಗಳ ಅನುಷ್ಠಾನಕ್ಕೆ ಆಯವ್ಯಯದಲ್ಲಿ ಅನುದಾನವನ್ನು ಒದಗಿಸಿರುತ್ತದೆ. ಆಯವ್ಯಯ 2015–16ರ ಕಂಡಿಕೆ 392 ರಲ್ಲಿ ಇಂಧನ ಇಲಾಖೆಗೆ ಒಟ್ಟು ರೂ. 12,878 ಕೋಟಿಗಳ ಅನುದಾನವನ್ನು ಒದಗಿಸಿರುತ್ತದೆ. ಈ ಅನುದಾನದಡಿ 2015–16 ವರ್ಷದ ಆಯವ್ಯಯ ಸವಿವರ ವೆಚ್ಚದ ಅಂದಾಜುಗಳು (ಸಂಪುಟ–VII) ರಡಿಯ ಲೆಕ್ಕ ಶೀರ್ಷಿಕೆ 2801–80–800–1–08 ರಂತೆ ಸೋಲಾರ್ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರವು ರೂ.20.00 ಕೋಟಿಗಳನ್ನು ಒದಗಿಸಿದೆ.

ಆರ್ಥಿಕ ಇಲಾಖೆರವರ ಮೇಲೆ ಓದಲಾದ (2)ರಲ್ಲಿ 2015–16ನೇ ಸಾಲಿಗೆ ಅಂಗನವಾಡಿ ಕೇಂದ್ರಗಳಲ್ಲಿ ಸೌರಶಕ್ತಿ ದೀಪಗಳನ್ನು ಮತ್ತು ಫ್ಯಾನ್‌ಗಳನ್ನು ಒದಗಿಸಲು ರೂ.5.00 ಕೋಟಿ ಅನುದಾನವನ್ನು ಒದಗಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಇಲಾಖೆಗೆ ಸಂಬಂಧಪಟ್ಟಂತೆ ಆಯವ್ಯಯದಲ್ಲಿ ಘೋಷಿಸಲಾಗಿದೆ (ಕಂಡಿಕೆ–176). ಆ ಪ್ರಕಾರ ಸೌರಶಕ್ತಿ ಯೋಜನೆಯ ಲೆಕ್ಕ ಶೀರ್ಷಿಕೆ 2801–80–800–1–08ರ 'ಕ್ರಿಯಾ ಯೋಜನೆ'ಯಡಿ ಇದನ್ನು ಸೇರ್ಪಡೆ ಮಾಡಲು ಇಂಧನ ಇಲಾಖೆಗೆ ತಿಳಿಸಿರುತ್ತಾರೆ.

ಪ್ರಸ್ತುತ ಸೋಲಾರ್ ಯೋಜನೆಗಳ ಅನುಷ್ಠಾನಕ್ಕೆ ಆಯವ್ಯಯ 2015–16ರಲ್ಲಿ ನೀಡಿರುವ ರೂ.20.00 ಕೋಟಿಗಳ ಅನುದಾನವನ್ನು ಇಂಧನ ಇಲಾಖೆಗೆ ಹಾಗೂ ಮಹಿಳಾ ಮತ್ತು ಮಕ್ಕಳ ಇಲಾಖೆಗೆ ಈ ಕೆಳಕಂಡಂತೆ ಒದಗಿಸಲು ಯೋಜಿಸಿದೆ:



AGM (SOG-2) 22/1/16

G.M
K.R.E.D.L.

Rs. In Crs

| Scheme | Allocation | Budget estimate | % allocation over total allocation | Women & Child Department allocation | Energy Department allocation |
|---|---|---|---|---|---|
| Solar Projects 2015-16 | General | 15.18 | 75.90% | 3.80 | 11.38 |
| | SCSP | 3.43 | 17.15% | 0.86 | 2.57 |
| | TSP | 1.39 | 6.95% | 0.35 | 1.04 |
| **Total** | | **20.00** | **100.00%** | **5.00** | **15.00** |

ಇಂಧನ ಇಲಾಖೆಗೆ 2015-16ನೇ ಸಾಲಿನಲ್ಲಿ ಒದಗಿಸಿರುವ ರೂ.20.00 ಕೋಟಿಗಳ ಅನುದಾನದಲ್ಲಿ ರೂ.15.00 ಕೋಟಿಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ(ಕೆ.ಆರ್.ಇ.ಡಿ.ಎಲ್)ದ ಮೂಲಕ ಜಾರಿಯಲ್ಲಿರುವ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸುವ ಯೋಜನೆಯನ್ನು ಮುಂದುವರೆಸಿಕೊಳ್ಳಲು ಉದ್ದೇಶಿಸಲಾಗಿದೆ ಮತ್ತು ರೂ.5.00 ಕೋಟಿಗಳನ್ನು ಮಹಿಳಾ ಮತ್ತು ಮಕ್ಕಳ ಇಲಾಖೆಗೆ ಒದಗಿಸಲು ಉದ್ದೇಶಿಸಿದೆ.

ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್ ರವರು ಮೇಲೆ ಓದಲಾದ (3)ರ ಪತ್ರದಲ್ಲಿ 2015-16ನೇ ಸಾಲಿನಲ್ಲಿ ಮೀಸಲಿರಿಸಿರುವ ರೂ.15.00 ಕೋಟಿಗಳನ್ನು, ಈಗಾಗಲೇ ಮೇಲೆ ಓದಲಾದ (4)ರಲ್ಲಿ ಕೆ.ಆರ್.ಇ.ಡಿ.ಎಲ್ ವತಿಯಿಂದ ಜಾರಿಯಲ್ಲಿರುವ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸುವ ಯೋಜನೆಗೆ ರೂ.15.00 ಕೋಟಿಗಳನ್ನು ಕೋರಿರುತ್ತಾರೆ. ಈ ಮೊತ್ತಕ್ಕೆ (ರೂ.15.00 ಕೋಟಿಗಳಿಗೆ) ಒಟ್ಟು 750 ಸಂಖ್ಯೆಯ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸಲು ಕ್ರಿಯಾ ಯೋಜನೆಯನ್ನು ಸಲ್ಲಿಸಿರುತ್ತಾರೆ.

ಇದರಂತೆ ಇಂಧನ ಇಲಾಖೆಗೆ ಒದಗಿಸಿರುವ ರೂ.15.00 ಕೋಟಿಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ(ಕೆ.ಆರ್.ಇ.ಡಿ.ಎಲ್)ಧ ಮುಂದುವರೆದ ಯೋಜನೆಯಾದ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸಲು ಯೋಜಿಸಿದೆ ಅದರಂತೆ ಈ ಆದೇಶ.

ಸದರಿ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 17 ವಿಎಸ್‌ಇ 2016,**
**ಬೆಂಗಳೂರು, ದಿನಾಂಕ:22.01.2016**

1. 2015-16ನೇ ಸಾಲಿನ ಲೆಕ್ಕ ಶೀರ್ಷಿಕೆ 2801-80-800-1-08 ದಂತೆ ಸೋಲಾರ್ ಯೋಜನೆಗಳ ಅನುಷ್ಠಾನಕ್ಕೆ ರೂ.20.00 ಕೋಟಿಗಳ ಅನುದಾನದಲ್ಲಿ ರೂ.15.00

ಕೋಟಿಗಳನ್ನು ಮುಂದುವರೆದ ಯೋಜನೆಯಾದ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸುವ ಯೋಜನೆಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ(ಕೆ.ಆರ್.ಇ.ಡಿ.ಎಲ್)ಕ್ಕೆ ಅನುದಾನ ನೀಡಿ ಆದೇಶಿಸಿದೆ.

2. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 684 ವೆಚ್ಚ1/2015 ದಿನಾಂಕ: 17.07.2015ರ ಸಹಮತಿಯಂತೆ ಸೋಲಾರ್ ಯೋಜನೆಗಳ ಅನುಷ್ಠಾನಕ್ಕೆ ರೂ.20.00 ಕೋಟಿಗಳ ಅನುದಾನದಲ್ಲಿ ಉಳಿದ ರೂ.5.00 ಕೋಟಿಗಳನ್ನು ಮಹಿಳಾ ಮತ್ತು ಮಕ್ಕಳ ಇಲಾಖೆಗೆ ಒದಗಿಸಲು ಆದೇಶಿಸಿದೆ.

<u>ನಿಬಂಧನೆಗಳು:</u>

- ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು KTPP ಅಧಿನಿಯಮದನ್ವಯ ಮುಂದಿನ ಕ್ರಮ ಜರುಗಿಸುವುದು.
- ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸಲು ಫಲಾನುಭವಿಗಳ ಆಯ್ಕೆ ಮತ್ತು ಮಾನದಂಡನೆಗಳ ಕುರಿತು ವಿವರವಾದ ಕಾರ್ಯತಂತ್ರ ಯೋಜನೆಯನ್ನು ಕೆ.ಆರ್.ಇ.ಡಿ.ಎಲ್ ಸಂಸ್ಥೆಯು ವಿದ್ಯುತ್ ವಿತರಣಾ ಕಂಪನಿಗಳ ಸಹಯೋಗದೊಂದಿಗೆ ಸಿದ್ಧಪಡಿಸಿ, ಕೂಡಲೇ ಇಂಧನ ಇಲಾಖೆಗೆ ಸಲ್ಲಿಸಲು ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಿ.ಎಸ್. ಯಡ್ರಾವಿ)
ಸರ್ಕಾರದ ಉಪ ಕಾರ್ಯದರ್ಶಿ
ಇಂಧನ ಇಲಾಖೆ.

ಇವರಿಗೆ,
ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಕರ್ನಾಟಕ ರಾಜ್ಯ ಪತ್ರ ಪ್ರಕಟಣೆಗಾಗಿ.

ಪ್ರತಿಗಳು:-

1. ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಮೆಸ್ಕಾಂ/ಹೆಸ್ಕಾಂ/ಜೆಸ್ಕಾಂ/ಸೆಸ್ಕ್
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ. 39, "ಶಾಂತಿ ಗೃಹ" ಪ್ಯಾಲೆಸ್ ರಸ್ತೆ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಬಿಲ್ಡಿಂಗ್, ಬೆಂಗಳೂರು.

4. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಹಿರಿಯ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
6. ವಿಶೇಷ ಅಧಿಕಾರಿ(ಸುಧಾರಣೆ) ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಕಾರ್ಯನಿರ್ವಾಹಕ ಇಂಜಿನಿಯರ್ 1/2/3 ಇ.ಎಂ.ಸಿ /ಯೋಜನೆಗಳು ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಶಾಖೆ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17ನೇ ಸಾಲಿಗೆ ಸೌರಶಕ್ತಿ ಯೋಜನೆಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ(ಕೆ.ಆರ್.ಇ.ಡಿ.ಎಲ್) ದಿಂದ ಅನುಷ್ಠಾನ ಕುರಿತು.

ಓದಲಾಗಿದೆ: 1. ಆಯವ್ಯಯ 2016-17ರಲ್ಲಿ ಕಂಡಿಕೆ 346 ರಂತೆ ಇಂಧನ ಇಲಾಖೆಗೆ ಒದಗಿಸಿರುವ ಅನುದಾನದಡಿ.

2. ಕೆ.ಆರ್.ಇ.ಡಿ.ಎಲ್ ರವರ ಪತ್ರ ಸಂಖ್ಯೆ: KREDL/07/SOG-2/07/2016/1266 ದಿನಾಂಕ: 26.03.2016.

3. ಸರ್ಕಾರಿ ಆದೇಶ ಸಂಖ್ಯೆ: ಇಎನ್ 54 ವಿಎಸ್‌ಸಿ 2014 ದಿನಾಂಕ:28.02.2015.

4. ಸರ್ಕಾರಿ ಆದೇಶ ಸಂಖ್ಯೆ: ಇಎನ್ 17 ವಿಎಸ್‌ಸಿ 2016 ದಿನಾಂಕ:22.01.2016.

********

ಸಂ. 1095
ದಿನಾಂಕ 02/05/16
ಬೆಂಗಳೂರು

ಪ್ರಸ್ತಾವನೆ:

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಮೇಲೆ ಓದಲಾದ (3)ರ ಸರ್ಕಾರದ ಆದೇಶದಂತೆ 5 (ಐದು) ಹೆಚ್.ಪಿ ಸಾಮರ್ಥ್ಯದ ಜಾಲಮುಕ್ತ ಸೌರಶಕ್ತಿ ಆಧಾರಿತ ನೀರಾವರಿ ಪಂಪ್‌ಸೆಟ್‌ನ್ನು ವಿತರಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಡಿ ಪ್ರಾಯೋಗಿಕವಾಗಿ 9 ತಾಲ್ಲೂಕುಗಳಲ್ಲಿ ಒಟ್ಟು 1009 ಸಂಖ್ಯೆಯ ಸೋಲಾರ್ ಪಂಪ್‌ಸೆಟ್‌ಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. ಈ ಯೋಜನೆಯಡಿ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ರೂ. 1 (ಒಂದು) ಲಕ್ಷ ವಂತಿಗೆಯೊಂದಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಯಾವುದೇ ವಂತಿಗೆ ಇಲ್ಲದೆ ಸೌರಶಕ್ತಿ ಚಾಲಿತ ನೀರಾವರಿ ಪಂಪ್‌ಸೆಟ್‌ಗಳನ್ನು ವಿತರಿಸಲಾಗುತ್ತಿದೆ. ಈ ಯೋಜನೆಯಡಿ ಕೆಆರ್‌ಇಡಿಎಲ್ ಸಂಸ್ಥೆಯಿಂದ ಮಾರ್ಚ್-2016 ಅಂತ್ಯಕ್ಕೆ-232 ಸಂಖ್ಯೆಯ ಸೋಲಾರ್ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿರುತ್ತದೆ.

ಮೇಲೆ ಓದಲಾದ (4)ರಂತೆ 2015-16 ಸಾಲಿನಲ್ಲಿ ಕ್ರೆಡಲ್ ಸಂಸ್ಥೆಗೆ ಮುಂದುವರೆದ ಯೋಜನೆಯಾಗಿ ಸೌರಶಕ್ತಿ ಚಾಲಿತ ನೀರಾವರಿ ಪಂಪ್‌ಸೆಟ್‌ಗಳನ್ನು ರೈತರಿಗೆ ವಿತರಿಸಲು ರೂ.15(ಹದಿನೈದು) ಕೋಟಿಗಳನ್ನು ನೀಡಲಾಗಿದ್ದು, ಇದರ ಜೊತೆಗೆ 2013-14 ಮತ್ತು 2014-15ರಲ್ಲಿ ಉಳಿಕೆಯಾದ ರೂ.4.44 ಕೋಟಿ ಅನುದಾನವನ್ನು ಸೇರಿಸಿ ಒಟ್ಟು ರೂ.19.44 ಕೋಟಿಗಳ ಮೊತ್ತದಲ್ಲಿ 750 ಸಂಖ್ಯೆಯ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸುವ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. ಈಗಾಗಲೇ ಕೆಆರ್‌ಇಡಿಎಲ್ ಸಂಸ್ಥೆಯಿಂದ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಸೋಲಾರ್ ಉತ್ಪಾದನೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಸರ್ಕಾರವು ಇಂಧನ ಇಲಾಖೆಗೆ, 2016-17 ವರ್ಷದ ಆಯವ್ಯಯ ಸವಿವರ ವೆಚ್ಚದ ಅಂದಾಜುಗಳು (ಸಂಪುಟ-VII) ರಡಿಯ ಲೆಕ್ಕ ಶೀರ್ಷಿಕೆ 2801-80-800-1-08 ರಂತೆ ಸೋಲಾರ್ ಯೋಜನೆಗಳ ಅನುಷ್ಠಾನಕ್ಕೆ ಒಟ್ಟುರೂ.20.00 (SCSP-Rs.3.43, TSP-Rs.1.39 ಮತ್ತು General-Rs.15.18) ಕೋಟಿಗಳನ್ನು ಒದಗಿಸಿದೆ.

2016-17ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ರೂ.20.00 ಕೋಟಿಗಳನ್ನು, ಈಗಾಗಲೇ ಮೇಲೆ ಓದಲಾದ (4)ರಲ್ಲಿ ಕೆ.ಆರ್.ಇ.ಡಿ.ಎಲ್ ವತಿಯಿಂದ ಜಾರಿಯಲ್ಲಿರುವ ಸೌರಶಕ್ತಿ

V. Balaram
MD

GM (Tech) I/C
KREDL

ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸುವ ಯೋಜನೆಯನ್ನು ಮುಂದುವರೆಸಲು ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್ ರವರು ಮೇಲೆ ಓದಲಾದ (2)ರ ಪತ್ರದ... ಕೋರಿರುತ್ತಾರೆ. ಈ ಮೊತ್ತಕ್ಕೆ (ರೂ.20.00 ಕೋಟಿಗಳಿಗೆ) ಒಟ್ಟು 780 ಸಂಖ್ಯೆಯ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಇದರಂತೆ ಇಂಧನ ಇಲಾಖೆಗೆ ಸೌರ ವಿದ್ಯುತ್ ಯೋಜನೆಗಳಿಗಾಗಿ ಒದಗಿಸಿರುವ ರೂ.20.00 ಕೋಟಿಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ(ಕೆ.ಆರ್.ಇ.ಡಿ.ಎಲ್)ದ ಮುಂದುವರೆದ ಯೋಜನೆಯಾದ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸುವ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಈ ಕೆಳಗಿನಂತೆ ಆದೇಶ.

ಸದರಿ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 17 ವಿಎಸ್‌ಇ 2016,**

**ಬೆಂಗಳೂರು, ದಿನಾಂಕ: 23.04.2016**

2016–17ನೇ ಸಾಲಿನ ಲೆಕ್ಕ ಶೀರ್ಷಿಕೆ 2801–80–800–1–08 ರಂತೆ ಸೋಲಾರ್ ಯೋಜನೆಗಳ ಅನುಷ್ಠಾನಕ್ಕೆ ಇಂಧನ ಇಲಾಖೆಗೆ ಒದಗಿಸಿರುವ ರೂ.20.00 (SCSP-Rs.3.43, TSP-Rs.1.39 ಮತ್ತು General-Rs.15.18)ಕೋಟಿಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ(ಕೆ.ಆರ್.ಇ.ಡಿ.ಎಲ್)ದ ಮುಂದುವರೆದ ಯೋಜನೆಯಾದ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸುವ ಕ್ರಿಯಾ ಯೋಜನೆಗೆ ಈ ಕೆಳಕಂಡ ಷರತ್ತು/ನಿಬಂಧನೆಗೊಳಪಡಿಸಿ, ಅನುಮೋದನೆ ನೀಡಿ ಆದೇಶಿಸಿದೆ.

- ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು KTPP ಅಧಿನಿಯಮದನ್ವಯ ಮುಂದಿನ ಕ್ರಮ ಜರುಗಿಸುವುದು.
- ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸಲು ಫಲಾನುಭವಿಗಳ ಆಯ್ಕೆ ಮತ್ತು ಮಾನದಂಡನೆಗಳ ಕುರಿತು ವಿವರವಾದ ಕಾರ್ಯತಂತ್ರ ಯೋಜನೆಯನ್ನು ಕೆ.ಆರ್.ಇ.ಡಿ.ಎಲ್ ಸಂಸ್ಥೆಯು ವಿದ್ಯುತ್ ವಿತರಣಾ ಕಂಪನಿಗಳ ಸಹಯೋಗದೊಂದಿಗೆ ಸಿದ್ದಪಡಿಸಿ, ಕೂಡಲೇ ಇಂಧನ ಇಲಾಖೆಗೆ ಸಲ್ಲಿಸಲು ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿಶ್ವನಾಥ ಪಿ. ಹಿರೇಮಠ)
ಸರ್ಕಾರದ ಉಪ ಕಾರ್ಯದರ್ಶಿ
ಇಂಧನ ಇಲಾಖೆ.

ಇವರಿಗೆ,
ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಕರ್ನಾಟಕ ರಾಜ್ಯ ಪತ್ರ ಪ್ರಕಟಣೆಗಾಗಿ.

ಪ್ರತಿಗಳು:-

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಮೆಸ್ಕಾಂ/ಹೆಸ್ಕಾಂ/ಜೆಸ್ಕಾಂ/ಸೆಸ್ಕ್.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ. 39, "ಶಾಂತಿ ಗೃಹ" ಪ್ಯಾಲೆಸ್ ರಸ್ತೆ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಬಿಲ್ಡಿಂಗ್, ಬೆಂಗಳೂರು.
3. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಹಿರಿಯ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5. ವಿಶೇಷ ಅಧಿಕಾರಿ(ಸುಧಾರಣೆ) ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಕಾರ್ಯನಿರ್ವಾಹಕ ಇಂಜಿನಿಯರ್ 1/2/3 ಇ.ಎಂ.ಸಿ /ಯೋಜನೆಗಳು ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಶಾಖೆ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 48 ವಿಎಸ್‌ಸಿ 2016

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:01-09-2016

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಇಂಧನ ಇಲಾಖೆ, ವಿಕಾಸಸೌಧ,
ಬೆಂಗಳೂರು.

ಸಂ.2386
ದಿನಾಂಕ 6/9/16

ಇವರಿಗೆ,
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ,
ನಂ. 39, "ಶಾಂತಿ ಗೃಹ" ಪ್ಯಾಲೆಸ್ ರಸ್ತೆ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಬಿಲ್ಡಿಂಗ್,
ಬೆಂಗಳೂರು-560001.

ಮಾನ್ಯರೇ,

ವಿಷಯ: ಸೌರ ಶಕ್ತಿ ಆಧಾರಿತ ನೀರಾವರಿ ಪಂಪ್‌ಸೆಟ್ ಒದಗಿಸುವ ಎರಡನೇ ಹಂತದ ಯೋಜನೆಗೆ ತಾಲ್ಲೂಕುವಾರು ಹಂಚಿಕೆ ನೀಡುವ ಬಗ್ಗೆ.

ಉಲ್ಲೇಖ: 1.ಸರ್ಕಾರದ ಆದೇಶ ಸಂಖ್ಯೆ: ಇಎನ್ 54 ವಿಎಸ್‌ಸಿ 2014 ದಿನಾಂಕ:28.2.2015.
2.ಸರ್ಕಾರದ ಆದೇಶ ಸಂಖ್ಯೆ: ಇಎನ್ 17 ವಿಎಸ್‌ಸಿ 2016 ದಿನಾಂಕ:22.1.2016.
3.ಸರ್ಕಾರದ ಆದೇಶ ಸಂಖ್ಯೆ: ಇಎನ್ 17 ವಿಎಸ್‌ಸಿ 2016 ದಿನಾಂಕ:23.4.2016.
4.ತಮ್ಮ ಪತ್ರ ಸಂಖ್ಯೆ:ಕೆಆರ್‌ಇಡಿಎಲ್/07/SOG-2/F19/2016/1915 ದಿನಾಂಕ: 25.05.2016.
5.ತಮ್ಮ ಕಛೇರಿ ಕಡತ ಸಂಖ್ಯೆ:SOG-2 File No:19 3811/EN/2016

******

MD KREDL

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸೌರಶಕ್ತಿ ಆಧಾರಿತ ನೀರಾವರಿ ಪಂಪ್‌ಸೆಟ್ ಒದಗಿಸುವ ಎರಡನೇ ಹಂತದ ಯೋಜನೆಯಲ್ಲಿ 1530 ಸಂಖ್ಯೆಯ ಸೋಲಾರ್ ಪಂಪ್‌ಗಳನ್ನು ಅಳವಡಿಸುವ ಯೋಜನೆಯ ಅನುಷ್ಠಾನ ಸಂಬಂಧ ತಾಲ್ಲೂಕುವಾರು ಹಂಚಿಕೆ ನೀಡಬೇಕೆಂದು ಕೋರಿ ಉಲ್ಲೇಖ ಪತ್ರ (4) ರನ್ವಯ ಮನವಿ ಸಲ್ಲಿಸಿರುತ್ತೀರಿ.

ಮುಂದುವರೆದು, ತಾಲ್ಲೂಕುವಾರು ಹಂಚಿಕೆಯನ್ನು ನೀಡುವಂತೆ ಉಲ್ಲೇಖ(5) ರ ತಮ್ಮ ಕಡತದಲ್ಲಿ ಕೋರಿರುತ್ತೀರಿ. ಆದರಂತೆ ಈ ಕೆಳಕಂಡಂತೆ ಜಿಲ್ಲಾವಾರು, ತಾಲ್ಲೂಕುವಾರು, ಸೌರ ವಿದ್ಯುತ್ ಪಂಪ್‌ಸೆಟ್‌ಗಳನ್ನೊಳಗೊಂಡಂತೆ ಹಂಚಿಕೆ ನೀಡಿದೆ:

| ಕ್ರಮ ಸಂಖ್ಯೆ | ಜಿಲ್ಲೆ | ತಾಲ್ಲೂಕು | ಸೌರ ಪಂಪ್‌ಸೆಟ್‌ಗಳ ಸಂಖ್ಯೆ |
|---|---|---|---|
| 1 | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ | 30 |
| 2 | ರಾಮನಗರ | ಮಾಗಡಿ | 50 |
| 3 | ಚಿಕ್ಕಬಳ್ಳಾಪುರ | ಗೌರಿಬಿದನೂರು | 30 |
| 4 | ತುಮಕೂರು | ಕುಣಿಗಲ್ | 30 |
| 5 | | ಮಧುಗಿರಿ | 30 |
| 6 | | ಸಿರಾ | 30 |
| 7 | | ಕೊರಟಗೆರೆ | 30 |
| 8 | | ತಿಪಟೂರು | 30 |
| 9 | ಚಿತ್ರದುರ್ಗ | ಚಳ್ಳಕೆರೆ | 30 |
| 10 | | ಹಿರಿಯೂರು | 30 |
| 11 | | ಹೊಸದುರ್ಗ | 30 |

| | | | |
|---|---|---|---|
| 12 | ದಾವಣಗೆರೆ | ಹೊನ್ನಾಳಿ | 30 |
| 13 | | ಜಗಳೂರು | 30 |
| 14 | ಮೈಸೂರು | ಮೈಸೂರು(ಹೆಚ್ಚುವರಿ) | 50 |
| 15 | | ಟಿ. ನರಸೀಪುರ | 30 |
| 16 | ಚಾಮರಾಜನಗರ | ಚಾಮರಾಜನಗರ | 30 |
| 17 | | ಗುಂಡ್ಲುಪೇಟೆ | 30 |
| 18 | ಮಂಡ್ಯ | ಮಂಡ್ಯ | 30 |
| 19 | | ಮದ್ದೂರು | 30 |
| 20 | | ಮಳವಳ್ಳಿ | 30 |
| 21 | | ಪಾಂಡವಪುರ | 30 |
| 22 | | ಶ್ರೀರಂಗಪಟ್ಟಣ | 30 |
| 23 | ಹಾಸನ | ಅರಸೀಕೆರೆ | 30 |
| 24 | | ಅರಕಲಗೂಡು | 30 |
| 25 | ಬೆಳಗಾವಿ | ಬೆಳಗಾವಿ ಗ್ರಾಮೀಣ | 50 |
| 26 | | ಬೈಲಹೊಂಗಲ | 30 |
| 27 | | ರಾಮದುರ್ಗ | 30 |
| 28 | | ಚಿಕ್ಕೋಡಿ | 20 |
| 29 | ವಿಜಯಪುರ | ಬಸವನಬಾಗೇವಾಡಿ | 30 |
| 30 | | ಮುದ್ದೇಬಿಹಾಳ | 30 |
| 31 | | ಇಂಡಿ | 30 |
| 32 | ಬಾಗಲಕೋಟೆ | ಜಮಖಂಡಿ | 30 |
| 33 | | ಬೀಳಗಿ | 50 |
| 34 | | ಹುನಗುಂದ | 30 |
| 35 | ಧಾರವಾಡ | ಕುಂದಗೋಳ | 30 |
| 36 | ಗದಗ | ಶಿರಹಟ್ಟಿ | 30 |
| 37 | | ರೋಣ | 30 |
| 38 | | ನರಗುಂದ | 30 |
| 39 | ಕಲ್ಬುರ್ಗಿ | ಕಲ್ಬುರ್ಗಿ | 50 |
| 40 | | ಜೇವರ್ಗಿ | 30 |
| 41 | | ಚಿತ್ತಾಪುರ | 30 |
| 42 | | ಚಿಂಚೋಳಿ | 30 |
| 43 | ಯಾದಗಿರಿ | ಯಾದಗಿರಿ | 30 |
| 44 | ರಾಯಚೂರು | ರಾಯಚೂರು | 30 |
| 45 | | ಸಿಂಧನೂರು | 30 |
| 46 | ಬಳ್ಳಾರಿ | ಸಂಡೂರು | 30 |
| 47 | ಬೀದರ್ | ಹುಮ್ನಾಬಾದ್ | 30 |
| 48 | | ಬಾಲ್ಕಿ | 30 |
| **ಒಟ್ಟು** | | | **1530** |

ಸೌರಶಕ್ತಿ ಆಧಾರಿತ ನೀರಾವರಿ ಪಂಪ್‌ಸೆಟ್ ಒದಗಿಸುವ ಎರಡನೇ ಹಂತದ ಯೋಜನೆಯನ್ನು ಮೇಲ್ಕಂಡ ತಾಲ್ಲೂಕುಗಳಲ್ಲಿ ಫಲಾನುಭವಿಗಳನ್ನು ಗುರುತಿಸಿ, ಉಲ್ಲೇಖ (1) ರ ಸರ್ಕಾರದ ಆದೇಶದ ಮಾನದಂಡಗಳನ್ನು ಅನುಸರಿಸಿ ಯೋಜನೆಯನ್ನು ಅನುಷ್ಠಾನಗೊಳಿಸಿ, ಸರ್ಕಾರಕ್ಕೆ ವರದಿ ನೀಡುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಎ.ಎ.ಚಪ್ಪರಬಂದ್)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ ಫೋನ್: 22034674